ಸಾಕ್ಷಿಯನ್ನು ದಿನಾಂಕಃ18.06.2026 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 1 ನೇ ಅರೋಪಿ ಪರ ಶ್ರೀ ಡಿ.ಎಲ್.ಎ.ಡಿ.ಸಿ ವಕೀಲರಿಂದ.

1. ಮೃತ ತಾಜ್ ಪಠಾಣ್ ರವರಿಗೆ ಮಧ್ಯಪಾನ ಮಾಡುವ ಅಭ್ಯಾಸ ಇರಲಿಲ್ಲ. ಆ ದಿನ ನನ್ನ ಚಿಕ್ಕಪ್ಪ ತಾಜ್ ಪಠಾಣ್ ರವರು ಫೋನ್ ಮಾಡಿ ನನಗೆ ಕರೆದಿದ್ದರು. ಯಾವ ನಂಬರ್ ನಿಂದ ಕರೆ ಮಾಡಿದ್ದರು ಎಂಬುದನ್ನು ಪೋಲಿಸರಿಗೆ ತಿಳಿಸಿರುತ್ತೇನೆ, ಆದರೆ ಈಗ ನೆನಪಿಲ್ಲ. ತಾಜ್ ಪಠಾಣ್ ರವರು ಮದ್ಯಾಹ್ಣ 1.00 ಯಿಂದ 2.00 ಗಂಟೆಯ ಅವಧಿಯಲ್ಲಿ ನನಗೆ ಕರೆ ಮಾಡಿದ್ದರು. ನಾನು ಆ ದಿನ ಕಾರಂಜಿಕಟ್ಟೆಯ ಅಂಗಡಿಯ ಬಳಿ ಇದ್ದೆನು. ಸದರಿ ಜಾಗಕ್ಕೆ ಆ ಕೂಡಲೆ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ತಾಜ್ ಪಠಾಣ್ ರವರು ಕಪ್ಪು ಮತ್ತು ಬಿಳಿ ಬಣ್ಣದ ಶರ್ಟ್ ಮತ್ತು ಜೀನ್ಸ್ ಪ್ಯಾಂಟ್ ಧರಿಸಿದ್ದರು. 1 ನೇ ಅರೋಪಿ ಮತ್ತು ಅವರ ಹೆಂಡತಿ ನಡುವೆ ನಡೆದ ಹಿಂದಿನ ಪಂಚಾಯಿತಿಗಳಿಗೆ ನಾನು ಹೋಗಿರುವುದಿಲ್ಲ. 1 ನೇ ಅರೋಪಿ ಮತ್ತು ತಾಜ್ ಪಠಾಣ್ ನಡುವೆ ಯಾವುದೇ ಮಾತುಕತೆ ಇರಲಿಲ್ಲ, ಆದರೆ ನಾನು 1 ನೇ ಅರೋಪಿಯೊಂದಿಗೆ ಚೆನ್ನಾಗಿ ಮಾತನಾಡಿಕೊಂಡು ಇರುತ್ತೇನೆ. ನಾನು 1 ನೇ ಅರೋಪಿಯ ಮನೆಗೆ ಎಂದಿಗೂ ಹೋಗಿರುವುದಿಲ್ಲ. 1 ನೇ ಅರೋಪಿ ಮತ್ತು ಅವರ ಹೆಂಡತಿ ಎಲ್ಲಿ ವಾಸ ಮಾಡುತ್ತಿದ್ದರು ಹಾಗೂ ಯಾವ ರೀತಿ ಜೀವನ ಮಾಡುತ್ತಿದ್ದರು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ತಾಜ್ ಪಠಾಣ್ ರವರು ನನಗೆ ಫೋನ್ ಮಾಡಿ ಕರೆದಿಲ್ಲ ಮತ್ತು ನಾನು ಅಲ್ಲಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಗಲಾಟೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. 1 ನೇ ಅರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. 1 ನೇ ಅರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಅರೋಪಿಯು ಯಾವುದೇ ಕೃತ್ಯ ಎಸಗದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

2. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು.2 ನ್ನು ಇದೇ ಮೊದಲ ಬಾರಿಗೆ ನೋಡುತ್ತಿರುವುದು ಎಂದರೆ ಸರಿಯಲ್ಲ.

(2 ನೇ ಅರೋಪಿಯ ಪರ ವಕೀಲರು ಹಾಜರಿಲ್ಲದ ಕಾರಣ, 2 ನೇ ಅರೋಪಿಯು ಸ್ವತಃ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟಿ ಸವಾಲನ್ನು ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**(ಮಾಯಣ್ಣ.ಬಿ.ಎಲ್)**
**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಕೋಲಾರ**